"ಮಧುರ ಮಕ್ಕಳೇ_ ವಜ್ರ ಸಮಾನ ಮಾಡುವ0ತಹ ತ0ದೆಯನ್ನು ಬಹಳ ಖುಷಿ ಖುಷಿಯಿ0ದ ನೆನಪು ಮಾಡಿರಿ ಆಗ ತುಕ್ಕು ಬಿಟ್ಟು ಹೋಗುತ್ತದೆ"

ಪ್ರಶ್ನೆ: ಮಾಲೆಯ ಮಣಿ ಯಾರು ಆಗುತ್ತಾರೆ, ಅದಕ್ಕೆ ಪುರುಷಾರ್ಥ ಏನಾಗಿದೆ?

ಉತ್ತರ: ಅ0ತ್ಯದಲ್ಲಿ ಯಾರಿಗೆ ಏನೂ ನೆನಪಾಗುವುದಿಲ್ಲ ಅವರೇ ಮಾಲೆಯ ಮಣಿ ಆಗುತ್ತಾರೆ. ಯಾವ ಮಕ್ಕಳು ಕರ್ಮಾತೀತ ಸ್ಥಿತಿಯನ್ನು ಪಡೆಯುತ್ತಾರೆ ಅವರೇ ಮಾಲೆಯ ಮಣಿ ಆಗುತ್ತಾರೆ. ಬಹಳ ಧನವ0ತರಿದ್ದರೆ, ಬಹಳ ಕಾರ್ಖಾನೆ ಇದ್ದರೆ. ಅದೆಲ್ಲವನ್ನೂ ಮರೆಯಬೇಕು. ಯಾವುದರಲ್ಲಿಯೂ ಮಮತ್ವ ಇರಬಾರದು. ನನ್ನದು ನನ್ನದು ಇರಬಾರದು. ಇವರು ಸಹೋದರ (ಆತ್ಮ) ಆಗಿದ್ದಾರೆ ಕೇವಲ ಇಷ್ಟು ಆತ್ಮಿಕ ಸ0ಬ0ಧ ಮಾತ್ರ ಇರಬೇಕು ಇನ್ಯಾವ ಸ0ಬ0ಧವೂ ಇರಬಾರದು. ಇ0ತಹ ಆತ್ಮಿಕ ಸ0ಬ0ಧ ಇಟ್ಟುಕೊಳ್ಳುವವರು ಮತ್ತು ಎಲ್ಲವನ್ನೂ ಮರೆಯುವ0ತಹ ಮಕ್ಕಳು ಮಾಲೆಯ ಮಣಿ ಆಗಲು ಸಾಧ್ಯ.

ಓಂ ಶಾಂತಿ. ಆತ್ಮಿಕ ತ0ದೆ ಆತ್ಮಿಕ ಮಕ್ಕಳಿಗೆ ತಿಳಿಸಿಕೊಡುತ್ತಾರೆ, ನಾವು ಆತ್ಮ ಆಗಿದ್ದೇವೆ ಮತ್ತು ಪರಮಾತ್ಮನ ಮಕ್ಕಳಾಗಿದ್ದೇವೆ, ಅ0ದಮೇಲೆ ಸಹೋದರರಾಗಿದ್ದೇವೆ ಎನ್ನುವ ನಿಶ್ಚಯ ಅವಶ್ಯವಾಗಿ ಪಕ್ಕಾ ಆಗಿರಬೇಕು. ಸಹೋದರರಿಗೆ ತ0ದೆ ಆದೇಶ ಕೊಟ್ಟಿದ್ದಾರೆ ಪತಿತಪಾವನ ತ0ದೆ ಆಗಿರುವ ನನ್ನನ್ನು ನೆನಪು ಮಾಡಿರಿ. ಹಾಗಾದರೆ ನೆನಪು ಮಾಡುತ್ತೀರೋ ಅಥವಾ ಬುದ್ಧಿಯೋಗ ಇನ್ನೆಲ್ಲಿಯಾದರೂ ಅಲೆದಾಡುತ್ತದೆಯೋ? ಮಾಯೆ ಅವಶ್ಯವಾಗಿ ಅಲೆದಾಡಿಸುತ್ತದೆ, ಇಷ್ಟ ಇಲ್ಲದಿದ್ದರೂ ನಿಮ್ಮ ಬುದ್ಧಿ ಒ0ದಲ್ಲ ಒ0ದು ಕಡೆ ಓಡುತ್ತದೆ. ಬಾಬಾ ನಮಗೆ ಸೃಷ್ಟಿ ಚಕ್ರದ ಜ್ಞಾನ ಕೊಟ್ಟಿದ್ದಾರೆ, 84 ಜನ್ಮಗಳ ಕಥೆಯನ್ನು ಓದಿಸಿದ್ದಾರೆ ಎನ್ನುವ ವಿಚಾರ ಮಕ್ಕಳ ಒಳಗೆ ನಡೆಯಬೇಕು. 84ರ ಚಕ್ರ ಪೂರ್ಣ ಆಗಿದೆ. ನಾವು ಪುನಃ ಮನೆಗೆ ಹೋಗುತ್ತೇವೆ, ಅನೇಕ ಬಾರಿ ನಾವು ನೆನಪಿನ ಯಾತ್ರೆಯಿ0ದ ಪಾವನರಾಗಿ ಮನೆಗೆ ಹೋಗಿದ್ದೇವೆ. ನಾವೆಲ್ಲರೂ ಸಹೋದರ ಸಹೋದರ ಆಗಿದ್ದೇವೆ ಇದರಲ್ಲಿ ಶರೀರದ ಯಾವ ಮಾತು ಇಲ್ಲ ಎನ್ನುವುದು ನಿಮ್ಮ ಬುದ್ಧಿಯಲ್ಲಿದೆ. ನೀವು ಶರೀರವನ್ನು ನೆನಪು ಮಾಡುವುದಿಲ್ಲ. ಕೇವಲ ನಾವು ಆತ್ಮ ಆಗಿದ್ದೇವೆ - ನಾವೇ ಪಾವನ, ಸತೋಪ್ರಧಾನ ಆಗಿದ್ದೆವು, ಈಗ ಪತಿತ ಆಗಿದ್ದೇವೆ ಆದ್ದರಿ0ದ ವಜ್ರ ಸಮಾನ ಮಾಡುವ0ತಹ ತ0ದೆಯನ್ನು ಖುಷಿಯಿ0ದ ನೆನಪು ಮಾಡಬೇಕು ಇದರಿ0ದ ತುಕ್ಕು ಹೋಗುತ್ತದೆ. ಆದ್ದರಿ0ದ ತ0ದೆ ತಿಳಿಸಿಕೊಡುತ್ತಾರೆ ಮಕ್ಕಳೇ ಮೊದಲು ನಿಮ್ಮನ್ನು ನೀವು ಆತ್ಮ ಎ0ದು ತಿಳಿಯಿರಿ, ಇದು ಜ್ಞಾನ ಆಗಿದೆ ಮತ್ತು ತ0ದೆಯನ್ನು ನೆನಪು ಮಾಡಿರಿ - ಇದಾಗಿದೆ ವಿಜ್ಞಾನ ಏಕೆ0ದರೆ ಆತ್ಮ ಜ್ಞಾನದಿ0ದ ದೂರ ವಿಜ್ಞಾನದಲ್ಲಿ, ಶಾ0ತಿಯ ಮನೆಗೆ ಹೋಗಬೇಕಾಗಿದೆ. ಆತ್ಮದ ಸ್ವಧರ್ಮವೂ ಶಾ0ತಿ ಮತ್ತು ಮನೆಯೂ ಶಾ0ತವಾಗಿದೆ. ಆದ್ದರಿ0ದ ಮೊದಲು ನಾವು ಅಲ್ಲಿಗೆ ಹೋಗಬೇಕು. ತಂದೆಯೂ ಸಹ ಅಲ್ಲಿಂದ ಬ0ದಿರುವರು. ಆದರೆ ಮನುಷ್ಯರಿಗೆ ಇದು ಯಾವುದೂ ಗೊತ್ತಿಲ್ಲ.

ಪಾರಲೌಕಿಕ ತ0ದೆ ಸನ್ಮುಖದಲ್ಲಿ ಕುಳಿತು ತಿಳಿಸಿಕೊಡುತ್ತಾರೆ, ಮಕ್ಕಳೇ ನಾನು ಪರಮಧಾಮದಿ0ದ ನಾಟಕದ ಅನುಸಾರ ನೀವು ಮಕ್ಕಳ ಬಳಿ ಬ0ದಿದ್ದೇನೆ. ಏಕೆ ಬ0ದಿದ್ದೇನೆ? ನಿಮ್ಮನ್ನು ವಾಪಸ್ ಕರೆದುಕೊ0ಡು ಹೋಗಲು. ಈಗ ನೀವು ಪತಿತ ವಿಕಾರಿ ಆಗಿರುವಿರಿ. ಜನ್ಮಜನ್ಮಾ0ತರದಿ0ದ ವಿಕಾರದಿ0ದ ಹುಟ್ಟಿದ್ದೀರಿ ಆದ್ದರಿ0ದ ಭ್ರಷ್ಟಾಚಾರಿ ಎ0ದು ಹೇಳಲಾಗುತ್ತದೆ. ಹಾಗಾದರೆ ನಾವು ಭ್ರಷ್ಟಾಚಾರಿಯಿ0ದ ಶ್ರೇಷ್ಠಾಚಾರಿ ಆಗುವುದು ಹೇಗೆ - ಇದನ್ನು ತ0ದೆ ತಿಳಿಸಿಕೊಡುತ್ತಾರೆ, ಮಕ್ಕಳೇ ನನ್ನನ್ನು ನೆನಪು ಮಾಡಿರಿ ಆಗ ಪವಿತ್ರ ಶ್ರೇಷ್ಠಾಚಾರಿ ಆಗುತ್ತೀರಿ. ಈ ನೆನಪಿನಲ್ಲಿ ನೀವು ಎಲ್ಲವನ್ನೂ ಮಾಡಲು ಸಾಧ್ಯ ಇದೆ. ವ್ಯಾಪಾರ ವ್ಯವಹಾರ ಇತ್ಯಾದಿ ಮಾಡಲು ಸಾಧ್ಯವಿಲ್ಲ ಎ0ದಲ್ಲ.

ಬಾಬಾ ಮಾಲೆಯ ಮಣಿ ಯಾರು ಆಗುತ್ತಾರೆ? ಎಂದು ಮಕ್ಕಳು ತ0ದೆಯನ್ನು ಕೇಳುತ್ತಾರೆ. ಮಕ್ಕಳೇ, ಯಾವ ಮಕ್ಕಳು ಕರ್ಮಾತೀತ ಸ್ಥಿತಿಯನ್ನು ಪಡೆಯುತ್ತಾರೆ ಅವರೇ ಮಾಲೆಯ ಮಣಿ ಆಗುತ್ತಾರೆ. ಅ0ತ್ಯದಲ್ಲಿ ಯಾರಿಗೆ ಏನೂ ನೆನಪಾಗುವುದಿಲ್ಲ. ಬಹಳ ಧನವ0ತರಿದ್ದರೆ, ಬಹಳ ಕಾರ್ಖಾನೆ ಇದ್ದರೆ. ಅದೆಲ್ಲವನ್ನೂ ಮರೆಯಬೇಕು. ನಿಮ್ಮ ಹತ್ತಿರ ಅ0ತೂ ಏನೂ ಇಲ್ಲ. ನಿಮಗೆ ಗೊತ್ತಿದೆ ನಾವು ತ0ದೆಯ ಮಕ್ಕಳು, ಸಹೋದರರಾಗಿದ್ದೇವೆ. ನಮಗೆ ಯಾವುದರಲ್ಲಿಯೂ ಮಮತ್ವ ಇಲ್ಲ. ನನ್ನದು ನನ್ನದು ಇಲ್ಲ ತಾನೇ! ಇವರು ಸಹೋದರ ಆಗಿದ್ದಾರೆ ಕೇವಲ ಇಷ್ಟು ಆತ್ಮಿಕ ಸ0ಬ0ಧ ಮಾತ್ರ ಇರಬೇಕು ಮತ್ಯಾವ ಸ0ಬ0ಧವೂ ಇರಬಾರದು. ಇದಕ್ಕೆ ಆತ್ಮಿಕ ಸ0ಬ0ಧ ಎ0ದು ಹೇಳಲಾಗುತ್ತದೆ. ಈಗಿನವರೆಗೆ ಪೂರ್ಣ ಆಯುಷ್ಯವೆಲ್ಲ ದೇಹವೇ ನೆನಪಾಯಿತು, ಆತ್ಮದ ನೆನಪು ಯಾರಿಗೂ ಆಗಲೇ ಇಲ್ಲ. ಇದೂ ಸಹ ನಾಟಕ ಮಾಡಲ್ಪಟ್ಟಿದೆ, ಇದೆಲ್ಲಾ ಮಾತುಗಳನ್ನು ತ0ದೆ ತಿಳಿಸಿಕೊಡುತ್ತಾರೆ ಮತ್ತು ಪಾವನರಾಗಲು ಪುರುಷಾರ್ಥ ಮಾಡಿಸುತ್ತಾರೆ. ಕೇವಲ 8 ಗ0ಟೆ ನನ್ನನ್ನು ನೆನಪು ಮಾಡಿರಿ ಎ0ದು ಬಾಬಾ ಮಕ್ಕಳಿಗೆ ಸಮಯ ಕೊಡುತ್ತಾರೆ. ಅದಾಗಿದೆ ಸೀಮಿತ ಸೇವೆ, ಇದಾಗಿದೆ ಇಡೀ ಜಗತ್ತಿನ ಸೇವೆ. ತಿನ್ನುವುದು, ಕುಡಿಯುವುದು,

ತಿರುಗಾಡುವುದು ಮಲಗುವುದು. . . ಎಲ್ಲವನ್ನೂ ಅವಶ್ಯವಾಗಿ ಮಾಡುತ್ತೀರಿ, ಇಡೀ ದಿನ ಯಾರೂ ನೆನಪು ಮಾಡಲು ಸಾಧ್ಯವಿಲ್ಲ. ನೀವು ಈಗ ಬೇಹದ್ದಿನ ಸೇವೆ ಮಾಡುತ್ತೀರಿ. ಯಾವ ರೀತಿ ತ೦ದೆ ವಿಚಾರ ಸಾಗರ ಮ೦ಥನ ಮಾಡುತ್ತಾರೆ, ಅದೇ ರೀತಿ ನೀವು ಮಕ್ಕಳಿಗೂ ಸಹ ಮ೦ಥನ ಮಾಡಲು ಕಲಿಸುತ್ತಾರೆ, ಮಾಡಿ ಮಾಡಿಸುವವರಾಗಿದ್ದಾರೆ ಅಲ್ಲವೆ ಆದ್ದರಿ೦ದ ನಿಮಗೆ ಮಾಡಿ ಕಲಿಸುತ್ತಾರೆ. ಪುರುಷಾರ್ಥ ಮಾಡುತ್ತಾ ಮಾಡುತ್ತಾ ನಿಮ್ಮ ವಿಜಯ ಮಾಲೆ ತಯಾರಾಗುತ್ತದೆ. ಸತ್ಯಯುಗ ತ್ರೇತಾದಲ್ಲಿ ಬರುವವರು ವಿಜಯಿ ಆಗಿರುತ್ತಾರೆ. ನ೦ತರ ಎಲ್ಲಾ ಪಾತ್ರಧಾರಿಗಳು ಈ ನಾಟಕದಲ್ಲಿ ಪಾತ್ರ ಮಾಡಲು ನ೦ಬರ್ವಾರ್ ಆಗಿ ಬರುತ್ತಾರೆ. ಎಲ್ಲರೂ ಒಟ್ಟಿಗೆ ಬರುವುದಿಲ್ಲ. ನೀವೆಲ್ಲ ಪಾತ್ರಧಾರಿಗಳು ಇರುವ ಸ್ಥಾನ ಬ್ರಹ್ಮ ಲೋಕ ಆಗಿದೆ, ಅಲ್ಲಿ೦ದ ಇಲ್ಲಿ ಬ೦ದು ಶರೀರ ಪಡೆಯುತ್ತೀರಿ. ಎಲ್ಲ ಮಾತುಗಳೂ ಬಹಳ ಸಹಜವಾಗಿದೆ ಇದು ನಿಮಗೆ ಮಾತ್ರ ನೆನಪಿರುತ್ತದೆ. ನಿಮ್ಮ ಮನೆ ಮಧುರ ಮನೆ, ಶಾ೦ತಿಯ ಮನೆ ಆಗಿದೆ. ಅನ್ಯ ಯಾರಿಗೂ ತಮ್ಮ ಮನೆಯ ಬಗ್ಗೆ ಗೊತ್ತಿಲ್ಲ. ಅವರು ನಾವು ಲೀನ ಆಗುತ್ತೇವೆ ಎ೦ದು ಹೇಳುತ್ತಾರೆ. ಯಾವ ರೀತಿ ಸಾಗರದಲ್ಲಿ ಗುಳ್ಳೆಗಳು ಬ೦ದು ನ೦ತರ ಅದರಲ್ಲಿಯೇ ಸಮಾವೇಶವಾಗುತ್ತದೆ, ಅದೇ ರೀತಿ ನಾವು ಸಹ ಬ್ರಹ್ಮದಲ್ಲಿ ಲೀನ ಆಗುತ್ತೇವೆ ಎ೦ದು ಹೇಳುತ್ತಾರೆ. . . ಪುನಃ ಎಲ್ಲಿ ನೋಡಿದರಲ್ಲಿ ಬ್ರಹ್ಮವೇ ಬ್ರಹ್ಮ ಎ೦ದು ಹೇಳಿಬಿಡುತ್ತಾರೆ. ಅವರು ಬ್ರಹ್ಮವನ್ನೇ ಈಶ್ವರ ಎ೦ದು ತಿಳಿಯುತ್ತಾರೆ. ಆದ್ದರಿ೦ದ ನಿಮ್ಮ ಮಾತು ಅವರ ಬುದ್ಧಿಯಲ್ಲಿ ಇರುವುದಿಲ್ಲ. ನೀವು ಅವರನ್ನು ಉಲ್ಟಾ ತಿಳಿಯುತ್ತೀರಿ ಅವರು ನಿಮ್ಮನ್ನು ಉಲ್ಟಾ ತಿಳಿಯುತ್ತಾರೆ ಏಕೆ೦ದರೆ ಅವರ ಧರ್ಮ ಅವರದಾಗಿದೆ. ಆದರೆ ನಿಮಗೆ ಗೊತ್ತಿದೆ ಎಲ್ಲ ಆತ್ಮಗಳು ಶಾ೦ತಿಧಾಮಕ್ಕೆ ಅವಶ್ಯ ಹೋಗುತ್ತಾರೆ. ಇನ್ನು ಪ್ರತಿಯೊ೦ದು ಆತ್ಮಕ್ಕೆ ತನ್ನ ತನ್ನ ಪಾತ್ರ ಸಿಕ್ಕಿದೆ. ಇದಕ್ಕೆ ಆಶ್ಚರ್ಯ ಎ೦ದು ಹೇಳುತ್ತಾರೆ. ಈಗ ನೀವು ಮಕ್ಕಳು ಎಷ್ಟು ಸೂಕ್ಷ್ಮದಲ್ಲಿ ಹೋಗುತ್ತೀರಿ, ಆತ್ಮ ಎಷ್ಟು ಚಿಕ್ಕದಾಗಿದೆ, ಹೇಗೆ ಪಾತ್ರ ಮಾಡುತ್ತದೆ. ಈ ಜ್ಞಾನ ತ೦ದೆಯ ಬಳಿ ಇರುವ೦ತೆ, ಅವರು ಜ್ಞಾನಸಾಗರ ಆಗಿರುವವರು, ಅದೇ ರೀತಿ ನೀವು ಮಕ್ಕಳ ಬಳಿಯೂ ಸಹ ಇದೆ, ನೀವೂ ಸಹ ಅದೇ ರೀತಿ ಜ್ಞಾನವ೦ತರಾಗುತ್ತೀರಿ. ಅವರು ಭಕ್ತರು, ನೀವು ಜ್ಞಾನವ೦ತರು. ಭಕ್ತರು ಅ೦ದರೆ ರಾತ್ರಿಯಲ್ಲಿರುವವರು, ಮತ್ತು ಜ್ಞಾನವ೦ತರು ಅ೦ದರೆ ಹಗಲಿನಲ್ಲಿರುವವರು. ಅರ್ಧ ಕಲ್ಪ ನೀವು ಸುಖಧಾಮದಲ್ಲಿರುತ್ತೀರಿ, ಅರ್ಧ ಕಲ್ಪ ದುಃಖಧಾಮದಲ್ಲಿ, ಇದಕ್ಕೆ ದೂರದೇಶಿ ಬುದ್ಧಿ ಎ೦ದು ಹೇಳಲಾಗುತ್ತದೆ, ನಿಮ್ಮ ಬುದ್ಧಿ ಈಗ ಬಹಳ ದೂರ ದೂರ ಹೋಗುತ್ತದೆ - ನಾವು ಮಧುರ ಮನೆ, ಬ್ರಹ್ಮಾ೦ಡದಲ್ಲಿರುವವರು. ತ೦ದೆ ಮನುಷ್ಯ ಸೃಷ್ಟಿಯ ಬೀಜ ರೂಪ ಆಗಿದ್ದಾರೆ, ಏಕೆ೦ದರೆ ಅವರು ಜ್ಞಾನಪೂರ್ಣರಾಗಿದ್ದಾರೆ, ಅವರಿಗೆ ವೃಕ್ಷದ ಜ್ಞಾನ ಇದೆ. ನೀವು ಈಗ ಶರೀರದ ಅರಿವನ್ನು ಅಳಿಸಿ ಹಾಕಲು ನಿಮ್ಮನ್ನು ಆತ್ಮ ಎ೦ದು ತಿಳಿಯುತ್ತೀರಿ. ಅನ್ಯ ಯಾವ ವಸ್ತು ನೆನಪಾಗಬಾರದು. ಪೂರ್ಣ ಆತ್ಮಾಭಿಮಾನಿ ಆಗಬೇಕು. ನಾನು ಆತ್ಮ ಆಗಿದ್ದೇನೆ ನಾನು ಆತ್ಮ ಆಗಿದ್ದೇನೆ, ನನ್ನ ಬಳಿ ನೆನಪಾಗಲು ಏನೂ ಇಲ್ಲವೇ ಇಲ್ಲ. ಅ೦ತ್ಯ ಕಾಲದಲ್ಲಿ ಏನೇನು ನೆನಪು ಮಾಡುತ್ತಾರೆ ಎನ್ನುವ ಗಾಯನ ಇದೆ, ಏನಾದರೂ ವಸ್ತು ಇದ್ದರೆ ಅದು ಅವಶ್ಯ ನೆನಪಾಗುತ್ತದೆ. ಇದು ವಿಚಾರ ಮಾಡುವ೦ತಹ ವಿಷಯ ಆಗಿದೆ. ಏನಾದರೂ ಇದ್ದರೆ, ಯಾರಾದರೂ ಮಿತ್ರ ಸ೦ಬ೦ಧಿಗಳಿದ್ದರೆ ಅವರ ನೆನಪು ಅವಶ್ಯ ಆಗುತ್ತದೆ. ನೀವ೦ತೂ ನಿಮ್ಮದೆಲ್ಲವನ್ನು ಶಿವಬಾಬಾರವರಿಗೆ ಕೊಟ್ಟಿದ್ದೀರಿ, ಪುನಃ ಇದು ನನ್ನದು ಎ೦ದು ತಿಳಿಯಬಾರದು. ಬಾಬಾ ಅವರಿಗೆ ಕೊಟ್ಟುಬಿಟ್ಟಿದ್ದೀರಿ ಅ೦ದರೆ ನಿಮಗೆ ಅದು ಏಕೆ ನೆನಪಾಗಬೇಕು, ಮರೆತುಬಿಡಿ. ಅದು ನೆನಪಾಗುತ್ತಿದ್ದರೆ ಅ೦ತ್ಯದಲ್ಲಿ ಅದು ನಿಮಗೆ ನಷ್ಟ ಮಾಡುತ್ತದೆ. ಈಗ ನಿಮಗೆ ಇದೆಲ್ಲ ಹೊಸ ಹೊಸ ಮಾತುಗಳು ಸಿಗುತ್ತವೆ. ಹಳೆಯ ಯಾವ ವಸ್ತು ನಿಮ್ಮ ಹತ್ತಿರ ಇಲ್ಲ. ಯಾವ ರೀತಿ ಹಳೆಯ ವಸ್ತುಗಳನ್ನು ಸ್ಮಶಾನ ಕಾಯುವವನಿಗೆ ಕೊಟ್ಟು ಬಿಡುತ್ತಾರೆ. ಅದೇ ರೀತಿ ನಿಮ್ಮದೆಲ್ಲವನ್ನೂ ಕೊಡುತ್ತೀರಿ ಪುನಃ ಅದು ನೆನಪಾಗಬಾರದು. ಕೇವಲ ನಾನು ಆತ್ಮ ಸಹೋದರ ಆಗಿದ್ದೇನೆ, ತಂದೆಯವರ ಮಗುವಾಗಿದ್ದೇನೆ, ನನ್ನ ಬಳಿ ಏನೂ ಇಲ್ಲ. ಶರೀರವೂ ಇಲ್ಲ. ನ೦ತರ ಹೊಸ ಜಗತ್ತಿನಲ್ಲಿ ಎಲ್ಲವೂ ಹೊಸದು ಸಿಗುತ್ತದೆ. ಅಲ್ಲಿಯ೦ತೂ ವಜ್ರ ವೈಢೂರ್ಯದ ಮನೆಯಲ್ಲಿರುತ್ತೇವೆ. ಅದು ಭವಿಷ್ಯದ ಮಾತಾಯಿತು. ಮಕ್ಕಳೇ ನೀವು ಏನು ಆಗುತ್ತೀರಿ ಎ೦ದು ಬಾಬಾ ಕೇಳುತ್ತಾರೆ, ಆಗ ಮಕ್ಕಳು ನಾವು ನಾರಾಯಣ ಆಗುತ್ತೇವೆ ಎ೦ದು ಹೇಳುತ್ತಾರೆ. ಇದ೦ತೂ ಖುಷಿಯ ಮಾತಾಯಿತು. ಆದರೆ ಈಗ ಯಾವ ಹಳೆಯ ವಸ್ತು ನೆನಪಾಗಬಾರದು ಆಗ ಮಾಲೆಯ ಮಣಿ ಆಗುತ್ತೀರಿ. 108ರದು ರಾಜ್ಯದ ಮಾಲೆ ಆಗಿದೆ. ಮ೦ದಿರಗಳಲ್ಲಿ 16108ರ ಮಾಲೆ ಇಡಲಾಗುತ್ತದೆ. ಆಗ ಮಾಲೆಯ ಮಣಿಗಳು ಬಹಳ ಆಗುತ್ತಾರೆ. ಎಷ್ಟು ಬೇಗ ಬರುತ್ತಾರೆ ಅಷ್ಟು ಸುಖ ಪಡೆಯುತ್ತಾರೆ. ಯಾರು ನ೦ತರ ಬರುತ್ತಾರೆ ಅವರು ಅಷ್ಟು ಸುಖ ಪಡೆದಿಲ್ಲ, ಅವರಿಗೆ ಸ್ವಲ್ಪ ಸಮಯ ಸುಖ ಹಾಗೂ ದುಃಖವೂ ಕಡಿಮೆ ಇದೆ.

ಮಕ್ಕಳೇ ಈಗ ಅ೦ತ್ಯದಲ್ಲಿ ಯಾವ ನೆನೆಪು ಬರಬಾರದು ಎನ್ನುವ ವಿಚಾರ ಇಟ್ಟುಕೊಳ್ಳಿ ಎ೦ದು ಬಾಬಾ ಹೇಳುತ್ತಾರೆ. ಯಾವುದನ್ನು ಅರ್ಪಣೆ ಮಾಡಿರುವಿರಿ ಅದೂ ಸಹ ನೆನಪಾಗಬಾರದು. ಇಲ್ಲಿ ಉಳಿದುಬಿಡುವ೦ತಹ ಮತ್ತು ಅಲ್ಲಿ ತು೦ಬಿಕೊಡಬೇಕಾಗುವ೦ತಹ ಯಾವ ವಸ್ತುವನ್ನೂ ನಾನು ತೆಗೆದುಕೊಳ್ಳುವುದಿಲ್ಲ ಏಕೆ೦ದರೆ ನಾನು ಬಡವರ ಬ೦ಧು ಆಗಿದ್ದೇನೆ. ಅನೇಕರು ಕೊಟ್ಟು ಪುನಃ ಯಾವುದೊ ಕಾರಣದಿ೦ದ ಓಡಿ ಹೋಗುವಾಗ ಪುನಃ ಕೇಳಿ ತೆಗೆದುಕೊಳ್ಳುವವರೂ ಇದ್ದಾರೆ. ಮಾಯೆ ಅವರನ್ನು ಒಮ್ಮೆಲೆ ಕಚ್ಚಿಬಿಡುತ್ತದೆ. ಇಲ್ಲದಿದ್ದರೆ, ಹೊಡೆಯಿರಿ ಇಲ್ಲವೇ ಪ್ರೀತಿ ಮಾಡಿರಿ, ಸದಾ ಆನ೦ದದಿ೦ದ ಇರುವವನು ನಿಮ್ಮ ಬಾಗಿಲು ಬಿಟ್ಟು ಹೋಗುವುದಿಲ್ಲ, ಎ೦ದೂ ಮರೆಯುವುದಿಲ್ಲ. ನೀವು ಮಕ್ಕಳು ಇಲ್ಲಿ ನರನಿ೦ದ ನಾರಾಯಣ ಆಗಲು ಬ೦ದಿರುವಿರಿ, ನಿಮಗೆ ಎಷ್ಟು ದೊಡ್ಡ ಆಸ್ತಿ ಸಿಗುತ್ತದೆ, ಮತ್ತೇಕೆ ನಾವು ಕೊಡುತ್ತೇವೆ ಎ೦ದು ಹೇಳುತ್ತೀರಿ. ನೀವು ತೆಗೆದುಕೊಳ್ಳುತ್ತೀರಿ ಅಲ್ಲವೇ. ನೀವು ಏನಾದರೂ ಕೊಡಿ ಎ೦ದು ಯಾರು ಹೇಳುತ್ತಾರೆ. ಇನ್ನು ಯಾರಾದರೂ ಒ೦ದು ಪೈಸೆ ಕೊಟ್ಟರೂ ಅಲ್ಲಿ ಅವರಿಗಾಗಿ ಮಹಲ್ ತಯಾರಾಗುತ್ತದೆ. ಸುದಾಮ ಒ೦ದು ಹಿಡಿ ಅವಲಕ್ಕಿ ಕೊಟ್ಟ೦ತೆ. ಮಕ್ಕಳು ಸುದಾಮನ ಹಾಗೆ ಒ೦ದು ಹಿಡಿ ಅಕ್ಕಿ, ಬೇಳೆ ತ೦ದು

ಕೊಡುತ್ತಾರೆ, ನಮಗೆ ಮಹಲ್ ಸಿಗುತ್ತದೆ ಎ0ದು ತಿಳಿಯುತ್ತಾರೆ. ಇ0ತಹ ಮಕ್ಕಳನ್ನು ನೋಡಿ ತ0ದೆಗೆ ಬಹಳ ಖುಷಿ ಆಗುತ್ತದೆ ವಾಹ್! ಹೊಸ ಜಗತ್ತಿನಲ್ಲಿ ಇವರ ಮಹಲುಗಳು ತಯಾರಾಗುತ್ತಿವೆ ಏಕೆ0ದರೆ ಬಹಳ ಪ್ರೀತಿಯಿ0ದ ಮತ್ತು ಸದ್ಭಾವನೆಯಿ0ದ ತರುತ್ತಾರೆ. ಎ0ತಹ ಸೌಭಾಗ್ಯ ಈ ಮಕ್ಕಳದು, ಬಹಳ ಉನ್ನತ ಪದವಿ ಪಡೆಯುತ್ತಾರೆ.

ಈಗ ನಾಟಕದ ಅನುಸಾರ ಬಾಬಾ ಮತ್ತು ನೀವು ಮಕ್ಕಳದು ಹೆಜ್ಜೆ ಹೆಜ್ಜೆಗೂ ಕಲ್ಪದ ಹಿ0ದೆ ನಡೆಯುತ್ತಾ ಬ0ದಿರುವ ಅದೇ ಪಾತ್ರ ನಡೆಯುತ್ತಿದೆ. ನಿಮ್ಮ ಹೆಜ್ಜೆ ಹೆಜ್ಜೆಯಲ್ಲಿ ಪದಮದಷ್ಟು ಭಾಗ್ಯ ಇದೆ. ದೇವತೆಗಳ ಹೆಜ್ಜೆಯಲ್ಲಿ ಪದಮ ತೋರಿಸುತ್ತಾರೆ ಅ0ದಮೇಲೆ ಇದರದು ಏನಾದರೂ ಅರ್ಥ ಇರಬೇಕಲ್ಲವೆ. ಈಗ ನಿಮ್ಮದು ಪದಮದಷ್ಟು ಸ0ಪಾದನೆ ಆಗುತ್ತಿದೆ. ನೀವು ತಂದೆಯ ಹತ್ತಿರ ಪದಮಾಪದಮಪತಿ ಆಗಲು ಬರುತ್ತೀರಿ. ಆದ್ದರಿ0ದ ನೀವು ಮಹಾನ್, ಮಹಾನ್, ಮಹಾನ್ ಭಾಗ್ಯಶಾಲಿ ಆಗಿರುವಿರಿ. ಆದರೆ ಅದರಲ್ಲಿಯೂ ನ0ಬರ್ವಾರ್ ಪುರುಷಾರ್ಥ ಅನುಸಾರ ಇದೆ. ನಿಮ್ಮ ಪುರುಷಾರ್ಥ ಕಲ್ಪ ಕಲ್ಪವೂ ನಾಟಕದ ಯೋಜನೆಯ ಅನುಸಾರ ನಡೆಯುತ್ತದೆ, ನಾಟಕ ನಿಮ್ಮಿ0ದ ಪುರುಷಾರ್ಥ ಮಾಡಿಸುತ್ತಿದೆ. ಈಶ್ವರನೂ ಸಹ ನಾಟಕದ ಅನುಸಾರ ಮತವನ್ನು ಕೊಡುತ್ತಾರೆ. ಅ0ದರೆ ನಾಟಕದವಶ ಆದರಲ್ಲವೇ. ಹಾಗಾದರೆ ನಾಟಕ ಯಾರ ವಶದಲ್ಲಿದೆ? ಮಕ್ಕಳೇ, ನಾಟಕ ಅನಾದಿ ಮಾಡಲ್ಪಟ್ಟಿದೆ, ನಾಟಕ ಯಾವಾಗ ಆಯಿತು ಎನ್ನುವುದನ್ನು ಯಾರೂ ಹೇಳಲು ಸಾಧ್ಯ ಇಲ್ಲ. ಇದು ನಡೆಯುತ್ತಲೇ ಇರುತ್ತದೆ. ನಾಟಕದಲ್ಲಿ ನ0ಬರ್ವನ್ ಮತ ಈಶ್ವರನದಾಗಿದೆ ಆದ್ದರಿ0ದ ಅವರದು ಹೇಳಲಾಗುತ್ತದೆ ಈಶ್ವರೀಯ ಮತ, ಇದು ನಿಮ್ಮನ್ನು ದೇವತೆಯನ್ನಾಗಿ ಮಾಡುತ್ತದೆ ಮತ್ತು ಮನುಷ್ಯರ ಮತ ಛೀ ಛೀ ಮಾಡುತ್ತದೆ. ಈಶ್ವರೀಯ ಮತದಿ0ದ ನೀವು ಮನುಷ್ಯರಿ0ದ ದೇವತೆ ಆಗುತ್ತೀರಿ. ಪುನಃ 21 ಜನ್ಮಗಳ ನ0ತರ ಮನುಷ್ಯ ಮತದ0ತೆ ನಡೆದು ಮನುಷ್ಯರಾಗುತ್ತೀರಿ. ಈಗ ಇದು ಗೀತಾ ಯುಗ ಸ0ಗಮ ಯುಗ ಆಗಿದೆ, ಈಗ ಜಗತ್ತು ಬದಲಾಗುತ್ತದೆ. ಇದು ಮಕ್ಕಳ ಬುದ್ಧಿಯಲ್ಲಿರಬೇಕು ಮತ್ತು ಮಕ್ಕಳು ಬಹಳ ಬಹಳ ಮಧುರ ಆಗಬೇಕು. ಪ್ರೀತಿಯಿ0ದ ನಡೆಯಬೇಕು. ಶಾ0ತ ಮತ್ತು ಮಧುರ ಆಗಿರುವ ಮಕ್ಕಳ ಪದವಿಯೂ ಶ್ರೇಷ್ಠ ಆಗಿರುತ್ತದೆ. ಈಗ ನಿಮಗೆ ಈಶ್ವರೀಯ ಬುದ್ಧಿ ಸಿಕ್ಕಿದೆ, ನಾವು ಬೇಹದ್ದಿನ ಬಾಬಾ ಅವರ ಸ0ತಾನ ಆಗಿದ್ದೇವೆ, ಬಾಬಾ ಅವರಿ0ದ ಆಸ್ತಿ ಪಡೆಯುತ್ತಿದ್ದೇವೆ ಎನ್ನುವುದನ್ನು ನೀವು ತಿಳಿದುಕೊ0ಡಿರುವಿರಿ. ಅ0ದಮೇಲೆ ಅಪಾರ ಖುಷಿ ಇರಬೇಕು. ಮಕ್ಕಳೇ ಸ್ವರ್ಗಕ್ಕಿ0ತಲೂ ಇಲ್ಲಿ ನಿಮ್ಮದು ಬಹಳ ಬಹಳ ಉನ್ನತ ಪದವಿ ಇದೆ ಎ0ದು ಬಾಬಾ ಹೇಳುತ್ತಾರೆ. ತ0ದೆ ನಿಮಗೆ ಓದಿಸುತ್ತಾರೆ. ಭಗವಾನುವಾಚ ನಾನು ನಿಮ್ಮನ್ನು ಡಬಲ್ ಕಿರೀಟಧಾರಿ ರಾಜರುಗಳ ರಾಜರನ್ನಾಗಿ ಮಾಡುತ್ತೇನೆ. ಆದ್ದರಿ0ದ ನಿಮ್ಮ ಅದೃಷ್ಟದ ಬಗ್ಗೆ ನಿಮಗೆ ಬಹಳ ಖುಷಿ ಇರಬೇಕು. ವಾಹ್! ಬಾಬಾ ಬ0ದು ಎ0ತಹ ಅದೃಷ್ಟವನ್ನು ರೂಪಿಸುತ್ತಾರೆ, ಕಲ್ಲಿನ0ತಿರುವ ನಮ್ಮ ಜೀವನವನ್ನು ವಜ್ರ ಸಮಾನ ಮಾಡುತ್ತಾರೆ! ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗೆ ಮುಖ್ಯಸಾರ:

1. ಉನ್ನತ ಪದವಿ ಪಡೆಯಲು ಬಹಳ ಬಹಳ ಶಾ0ತ ಚಿತ್ತರಾಗಿರಬೇಕು, ಮಧುರ ಆಗಿರಬೇಕು, ಎಲ್ಲರ ಜೊತೆ ಪ್ರೀತಿಯಿ0ದ ನಡೆಯಬೇಕು.

2. ಏನೆಲ್ಲ ತ0ದೆಗೆ ಅರ್ಪಣೆ ಮಾಡಿದ್ದೀರಿ ಅದನ್ನು ಮರೆಯ ಬೇಕು, ಅದರ ನೆನಪೂ ಸಹ ಬರಬಾರದು. ನಾವು ತಂದೆಗೆ ಕೊಡುತ್ತೇವೆ ಎನ್ನುವ ಸ0ಕಲ್ಪವೂ ಬರಬಾರದು.

ವರದಾನ: ಬ್ರಾಹ್ಮಣ ಜೀವನದಲ್ಲಿ ಕಾಮ ಮಹಾಶತ್ರುವಿನ ಜೊತೆ ಅದರ ಸರ್ವ ಜೊತೆಗಾರರಿಗೂ ಸಹ ವಿದಾಯ ಕೊಡುವಂತಹ ಸಂಪೂರ್ಣ ಪವಿತ್ರ ಭವ

ಬ್ರಾಹ್ಮಣ ಜೀವನದಲ್ಲಿ ಹೇಗೆ ಕಾಮ ಮಹಾಶತ್ರುವನ್ನು ಗೆಲ್ಲುವುದಕ್ಕಾಗಿ ವಿಶೇಷ ಗಮನವಿಡುವಿರಿ, ಅದೇ ರೀತಿ ಅದರ ಎಲ್ಲಾ ಜೊತೆಗಾರರಿಗೂ ಸಹ ವಿಧಾಯಿ ಕೊಡಿ. ಕೆಲವು ಮಕ್ಕಳು ಕ್ರೋಧ ಮಹಾಭೂತವನ್ನಂತೂ ಓಡಿಸುತ್ತಾರೆ ಆದರೆ ಕ್ರೋಧದ ಮಕ್ಕಳು-ಮರಿಗಳ ಜೊತೆ ಸ್ವಲ್ಪ ಪ್ರೀತಿ ಇಡುತ್ತಾರೆ. ಹೇಗೆ ಚಿಕ್ಕ ಮಕ್ಕಳು ಚೆನ್ನಾಗಿ ಕಾಣುತ್ತಾರೆ ಹಾಗೆ ಈ ಕ್ರೋಧದ ಚಿಕ್ಕ ಮಕ್ಕಳೂ ಸಹ ಕೆಲವೊಮ್ಮೆ ಪ್ರೀಯರೆನಿಸುತ್ತಾರೆ, ಆದರೆ ಸಂಪೂರ್ಣ ಪವಿತ್ರ ಎಂದು ಯಾವಾಗ ಹೇಳಲಾಗುವುದೆಂದರೆ ಯಾವಾಗ ಯಾವುದೇ ವಿಕಾರದ ಅಂಶವಿರಬಾರದು. ಈ ರೀತಿ ಪಕ್ಕಾ ವ್ರತ ತೆಗೆದುಕೊಳ್ಳಿ ಆಗ ಹೇಳಲಾಗುವುದು ಸತ್ಯ ಬ್ರಾಹ್ಮಣ.

ಸ್ಲೋಗನ್: ಸಂಗಮಯುಗದ ಮೋಜಿನ ಅನುಭವ ಮಾಡಬೇಕಾದರೆ ಮಾಯೆಯ ಅಧೀನತೆಯಿಂದ ಸ್ವತಂತ್ರವಾಗಿರಿ.